ಬೇರೆಯಾಗಿವೆ. ಮನುಷ್ಯ ಸಂಬಂಧಗಳ ಗೋಜಲು, ಕಳೆದುಕೊಳ್ಳುವ ಭಯ, ಸೃಷ್ಟಿಸುವ ಖಾಲಿತನ, ಕಾಲದ ಸ್ಥಿತ್ಯಂತರ ಹುಟ್ಟುಹಾಕುವ ನೋವು–ಯಾತನೆಗಳ ನಡುವೆ ಒಂದರೆಕ್ಷಣ ಕೃಪೆಯಂತೆ ಪ್ರಾಪ್ತವಾಗುವ ಧನ್ಯತೆ, ಸಾರ್ಥಕತೆಗಳನ್ನು ನನ್ನ ಕಥೆಗಳು ಹುಡುಕುತ್ತವೆಂದು ಭಾವಿಸಿದ್ದೇನೆ. ಹಲವೊಮ್ಮೆ ಲೇಖಕನಿಗೆ ಅನಾಯಾಸವಾಗಿ ದೊರಕುವ ಮನ್ನಣೆ ಸ್ಥಾನಮಾನಗಳು ಒಂದು ಬಗೆಯ 'ನೆಮ್ಮದಿಯ ಭಾವ'ವನ್ನು ಸೃಷ್ಟಿಸಿ, ಲೇಖಕ, ಜನ (ವಿಮರ್ಶಕರು) ಮೆಚ್ಚುವುದನ್ನಷ್ಟೇ ಬರೆಯುವ ಏಕತಾರಿಯಾಗಬಹುದು. ಒಂದೇರಾಗ ಮತ್ತು ಸಂತೃಪ್ತಸ್ಥಿತಿಯನ್ನು ನಿರಂತರವಾಗಿ ಮೀರಲು ಯತ್ನಿಸುವುದು ಕೂಡ ಲೇಖಕರ ಕಸುಬೇ.

ಬರಹವನ್ನು ಜೀವನ್ಮರಣದ ಪ್ರಶ್ನೆಯಾಗಿ ತೆಗೆದುಕೊಂಡ ಲೇಖಕರು ತಾವು ಮರುಪೂರಣ ಅಥವ ಪುನರುಜ್ಜೀವ ಸಾಧಿಸುವ ಸಹಜ ವಿಧಾನವನ್ನು ಕಂಡುಕೊಂಡಿರುತ್ತಾರೆ. ವಿಸ್ತೃತ ಅಧ್ಯಯನ, ಸಾರ್ಥಕ ಒಡನಾಟ, ಹುಡುಕಾಟ, ತನ್ಮಯತೆಯ ಮೂಲಕ ಗ್ರಹಿಕೆ ಮತ್ತು ಸಂವೇದನೆಗಳನ್ನು ಹರಿತಗೊಳಿಸಿಕೊಳ್ಳುವುದು ನಾನು ಕಂಡುಕೊಂಡ ದಾರಿಗಳಾಗಿವೆ. ಹಿಂದೆ ಓರಿಯಂಟ್ ಲಾಂಗ್ಮನ್ ಪ್ರಕಾಶನ ಸಂಸ್ಥೆಯಲ್ಲಿ ಸಂಪಾದಕನಾಗಿ ಕೆಲಸ ಮಾಡುವಾಗ ದೊರಕಿದ ಸಹೋದ್ಯೋಗಿಗಳು, ಭೇಟಿಯಾದ ಲೇಖಕರು ಮತ್ತು ಆಗ ವಿರಳವಾಗಿದ್ದ ರಾಷ್ಟ್ರೀಯ ಪುಸ್ತಕ ಪ್ರದರ್ಶನಗಳಿಗಾಗಿ ಕೈಗೊಂಡ ಪ್ರವಾಸಗಳು, ಸಾಹಿತ್ಯದ ಕುರಿತು ದೃಷ್ಟಿಕೋನವನ್ನು ಬದಲಿಸಿದವು. ಆನಂತರದ ದಿನಗಳಲ್ಲೂ ನನ್ನ ವೃತ್ತಿಗಳ ಬದಲಾವಣೆಯಿಂದ ಮತ್ತು ಆ ಸಂಬಂಧಿಯಾಗಿ ಕೈಗೊಂಡ ಪಯಣದ ಅನುಭವಗಳು ಕೆಲವು ಕಥೆಗಳನ್ನು ಬರೆಯಲು ಅನುವು ಮಾಡಿಕೊಟ್ಟವು. ಬಾಲ್ಯ, ತಾರುಣ್ಯದ ಅನುಭವಗಳೂ ಕಥೆಗಳಿಗೆ ದ್ರವ್ಯವಾಗಿರುವುದುಂಟು.

★★★

ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಸಾಹಿತ್ಯ ಸಂದರ್ಭಕ್ಕಿಂತ ವಿಶ್ವ ಸಾಹಿತ್ಯವೇ ನನ್ನನ್ನು ಹೆಚ್ಚು ಪ್ರಭಾವಗೊಳಿಸಿದೆ ಎನ್ನುವುದು ನಿಜ. ಅದರಲ್ಲೂ, ಆಫ್ರಿಕನ್, ಲ್ಯಾಟಿನ್ ಅಮೆರಿಕನ್, ಸ್ಪ್ಯಾನಿಶ್, ಫ್ರೆಂಚ್, ಅರಬ್ ಮತ್ತು ಆಗ್ನೇಯ ಏಶಿಯಾದ ಲೇಖಕರಿಂದ ಕಥನಕಲೆಯ ಕಸುಬುದಾರಿಕೆಯನ್ನು ಹರಿತಗೊಳಿಸಿಕೊಂಡಿದ್ದೇನೆ.

ಕಥೆ ಬರೆದಾದ ಮೇಲೆ ಅದನ್ನೋದುವ ಒಂದಿಬ್ಬರು ಗೆಳೆಯರಿದ್ದಾರೆ. ಕಥೆಯ ಕುರಿತು ಅವರು ಹೇಳುವ ವಿಮರ್ಶೆಯ ಅಂಶಗಳೆಲ್ಲ ಪರಿಗಣಿಸುವೆ. ಮನವರಿಕೆಯಾದರೆ ಹಲವೊಮ್ಮೆ ಬದಲಿಸುವೆ. ಕಥೆಗಳು ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೂ ತಿದ್ದುವುದು ರೂಢಿ. ಹೀಗಾಗಿ, ಕಥಾಸಂಕಲನಗಳಲ್ಲಿ ಓದುವ ಕಥೆಗಳೇ ಅಂತಿಮ ಪಠ್ಯಗಳು. ಲೇಖಕನಿಗೆ ಓದುಗ ಯಾವಾಗಲೂ ಅಗೋಚರ. ಒಂದು ಬಗೆಯ ರಮ್ಯ ಕಲ್ಪನೆಯಿಂದ ಹುಟ್ಟುವ ಈ ಸಂಬಂಧ ಹಾಗಿದ್ದರೇನೆ ಚೆನ್ನ. ಇಂಥ ನೂರಾರು ಅನಾಮಿಕ–ಅಗೋಚರ ಓದುಗರನ್ನು ಕಥೆಗಳ ಮೂಲಕ ತಲುಪುವುದಷ್ಟೇ ಲೇಖಕನ ಕೆಲಸ. ಲೇಖಕನಾಗಿ ಎಲ್ಲ ಓದುಗರನ್ನು ಭೌತಿಕವಾಗಿ ಭೇಟಿಯಾಗುವ ಕನಸನ್ನು ನಾನು ಕಾಣಲಾರೆ. ಆದಾಗ್ಯೂ, ಈ ವರ್ಷಗಳಲ್ಲಿ ಅಚ್ಚರಿಯಂತೆ ಆಕಸ್ಮಿಕವಾಗಿ ಸಿಕ್ಕು ಕಥೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಎಷ್ಟೋ ಓದುಗರು ಹಂಚಿಕೊಂಡಿದ್ದಾರೆ. ಅದೊಂದು ಮಂತ್ರಮುಗ್ಧ ಕ್ಷಣ.

ಇನ್ನು ಸ್ವಾರ್ಥ, ಗುಂಪುಗಾರಿಕೆ, ಪ್ರಾದೇಶಿಕತೆ, ಉಪಭಾಷೆ, ಜಾತಿ ಇತ್ಯಾದಿಗಳ